# ಪಿಳ್ಳಂಗೋವಿಯ ಚೆಲ್ವ ಕೃಷ್ಣನ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 376.
2. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 48.
3. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
4. **Note:** Lyrics in the above references are same and the singer has followed these lyrics.

ರಾಗ: ಕಲ್ಯಾಣಿ ತಾಳ: ತ್ರಿಪುಟ

ಪಿಳ್ಳಂಗೋವಿಯ ಚೆಲ್ವ ಕೃಷ್ಣನ
ಎಲ್ಲಿ ನೋಡಿದಿರಿ, ರಂಗನ ಎಲ್ಲಿ ನೋಡಿದಿರಿ || ಪ ||

ಎಲ್ಲಿ ನೋಡಿದರಲ್ಲಿ ತಾನಿಲ್ಲ-ದಿಲ್ಲವೆಂದು ಬಲ್ಲ ಜಾಣರು || ಅಪ ||

ನಂದಗೋಪನ ಮಂದಿರಂಗಳ ಸಂದುಗೊಂದಿನಲಿ
ಚೆಂದ ಚೆಂದದ ಗೋಪ ಬಾಲರ ವೃಂದ ವೃಂದದಲಿ
ಸುಂದರಾಂಗದ ಸುಂದರಿಯರ ಹಿಂದು ಮುಂದಿನಲಿ
ಅಂದದಾಕಳ ಕಂದ ಕರುಗಳ ಮಂದೆ ಮಂದೆಯಲಿ || ೧ ||

ಶ್ರೀ ಗುರೂಕ್ತ ಸದಾ ಸುಮಂಗಳ ಯೋಗ ಯೋಗದಲಿ
ಆಗಮಾರ್ಥದೊಳಗೆ ಮಾಡುವ ಯಾಗ ಯಾಗದಲಿ
ಶ್ರೀಗೆ ಭಾಗ್ಯನಾಗಿ ವರ್ತಿಪ ಭೋಗ ಭೋಗದಲಿ
ಭಾಗವತರು ಸದಾ ಬಾಗಿ ಪಾಡುವ ರಾಗ ರಾಗದಲಿ || ೨ ||

ಈ ಚರಾಚರದೊಳಗೆ ಜನಂಗಳಾಚೆ ಈಚೆಯಲಿ
ಖೇಚರೇಂದ್ರನ ಸುತನ ರಥದ ಚೌಕ ಪೀಠದಲಿ
ನಾಚದೆ ಮಾಧವ ಎಂಬ ಭಕ್ತರ ವಾಚ ಕಂಗಳಲಿ
ವೀಚುಕೊಂಡದ ಪುರಂದರ ವಿಠಲನ ಲೋಚನಾಗ್ರದಲಿ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಪಿಳ್ಳಂಗೋವಿ** – ಕೊಳಲು.

**ಆಗಮಾರ್ಥದೊಳಗೆ** – ಆಗಮಗಳಲ್ಲಿ ಹೇಳಿರುವ ವಿಧಿಯಲ್ಲಿ.

**ಶ್ರೀಗೆ** – ಲಕ್ಷ್ಮಿಗೆ.

**ಖೇಚರೇಂದ್ರನ ಸುತ** – ಇಂದ್ರನ ಮಗನಾದ ಅರ್ಜುನ.

**ಭಕ್ತರ ವಾಚಕಂಗಳಲಿ** – ಭಕ್ತರು ಸಲ್ಲಿಸುವ ಪ್ರಾರ್ಥನೆಗಳಲ್ಲಿ.

**ವೀಚುಕೊಂಡದ** – ಮರೆಯಾಗದೆ ಇರುವ.

**ಲೋಚನಾಗ್ರ** – ಕಣ್ಣಿನಕೊನೆ; ಕಡೆಗಣ್ಣಿನ ನೋಟ.

**Classification:** Keerthane
**Ankita:** purandara vittala
**Location:** NA
**Category:** Krishna Stuti
**Sub-Category:** Krishna, ranga, gopi, Gopala, govu, mangala, jana, bhoga, yaga, Bhagya, bhagavata, pandava, Lakshmi, kolalu,
**Pravachana:** NA
**Explanation:** Dr. Vijayendra Desai.